ದಿನಾಂಕಃ 25-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಃ 4 ರಿಂದ 8 ನೇ ಪ್ರತಿವಾದಿಗಳ ಪರ ಃ ಶ್ರೀ ವಿ ಎಲ್ ಎಚ್ ವಕೀಲರಿಂದಃ**

7. ತಾಯವ್ವ ಕೋಂ ರಾಮಪ್ಪ ಮಡಿವಾಳರ ಅವರಿಗೆ ಒಟ್ಟು ಮೂವರು ಜನ ಮಕ್ಕಳು. ಅವರೆಂದರೆ, ನಾಗಪ್ಪ, ಮಲ್ಲವ್ವ ಮತ್ತು ಗಂಗವ್ವ ಎಂದರೆ ಸರಿ. ರಾಮಪ್ಪ ಮಡಿವಾಳರ ಒಕ್ಕಲುತನ ಮಾಡುತ್ತಿದ್ದ ಎಂದರೆ ಸರಿ. ತಾಯವ್ವ ತನ್ನ ಗಂಡನ ಆದಾಯದಲ್ಲಿ ಬಂದ ಹಣದಿಂದ ದಾವಾ ಆಸ್ತಿಗಳನ್ನು ಖರೀದಿ ಹಿಡಿದಿದ್ದಳು ಎಂದರೆ ಸರಿ. 1 ರಿಂದ 8 ನೇ ಪ್ರತಿವಾದಿಗಳು ನಾಗಪ್ಪ ತಂದೆ ರಾಮಪ್ಪ ಮಡಿವಾಳರ ಅವರ ವಾರಸುದಾರರು ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ನಾಗಪ್ಪನ 2 ನೇ ಹೆಂಡತಿ ಮಕ್ಕಳು ಎಂದರೆ ಸರಿ. 4 ನೇ ಪ್ರತಿವಾದಿ ಗಂಡ ಹಾಗೂ 5 ರಿಂದ 8 ನೇ ಪ್ರತಿವಾದಿಗಳು ರಾಮಪ್ಪನ 1 ನೇ ಹೆಂಡತಿ ಮಕ್ಕಳು ಎಂದರೆ ಸರಿ. ತಾಯವ್ವ ಈಗ ಪೋತಿಯಾಗಿದ್ದಾರೆ ಎಂದರೆ ಸರಿ. ಸದರಿ ತಾಯವ್ವನ ಗಂಡ ರಾಮಪ್ಪನೂ ಸಹ ಪೋತಿಯಾಗಿದ್ದಾನೆ ಎಂದರೆ ಸರಿ. 9 ರಿಂದ 17 ನೇ ಪ್ರತಿವಾದಿಗಳು ಮಲ್ಲವ್ವನ ಮಕ್ಕಳು, ಸೊಸೆ ಮತ್ತು ಮೊಮ್ಮಕ್ಕಳು ಎಂದರೆ ಸರಿ. ಅವರನ್ನು ಹೊರತು ಪಡಿಸಿ ಮಲ್ಲವ್ವಳಿಗೆ ಬೇರೆ ಯಾರು ವಾರಸುದಾರರು ಇಲ್ಲ ಎಂದರೆ ಸರಿ. ನಾನು ಗಂಗವ್ವಳ ವಾರಸುದಾರ ಎಂದರೆ ಸರಿ. ಸದರಿ ದಾವಾ ಆಸ್ತಿಗಳಲ್ಲಿ 4 ರಿಂದ 8 ನೇ ಪ್ರತಿವಾದಿಗಳಿಗೆ ಹಿಸ್ಸಾ ಹಕ್ಕು ಇದೆ ಎಂದರೆ ಸರಿ.

**<u>ಮರು ವಿಚಾರಣೆ</u>** ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.